ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 04-12-1995.

# *ಯಥಾರ್ಥವಾದ ನಿಶ್ಚಯದ ಬುನಾದಿಯ ಮೂಲಕ ಸಂಪೂರ್ಣ ಪವಿತ್ರತೆಯನ್ನು ಧಾರಣೆ ಮಾಡಿರಿ.*

(यथार्थ निश्चय के फाउण्डेशन द्वारा सम्पूर्ण पवित्रता को धारण करो)

ಇಂದು ಬಾಪ್‌ದಾದಾರವರು ದೇಶ-ವಿದೇಶದ ನಾಲ್ಕೂ ಕಡೆಯ ಹೊಸ ಹೊಸ ಮಕ್ಕಳನ್ನು ನೋಡುತ್ತಿದ್ದಾರೆ. ಆ ಮಕ್ಕಳು ಸಾಕಾರವಾಗಿ ಮಧುಬನದಲ್ಲಿ ಇರಬಹುದು, ಅಥವಾ ಆಕಾರ ರೂಪದಲ್ಲಿ ತಮ್ಮ ತಮ್ಮ ಸೇವಾ-ಸ್ಥಾನದಲ್ಲಿ ಇರಬಹುದು. ಇಂತಹ ಹೊಸ ಮಕ್ಕಳನ್ನು ನೋಡಿ ಬಾಪ್‌ದಾದಾರವರು ಎಲ್ಲರ ನಿಶ್ಚಯವನ್ನು ನೋಡುತ್ತಿದ್ದಾರೆ. ಏಕೆಂದರೆ ನಿಶ್ಚಯವು ಈ ಬ್ರಾಹ್ಮಣ ಜೀವನದ ಸಂಪನ್ನತೆಗೆ ಬುನಾದಿ ಮತ್ತು ಬುನಾದಿ ಗಟ್ಟಿಯಾಗಿದ್ದರೆ ಸಹಜವಾಗಿ ಮತ್ತು ತೀವ್ರ ವೇಗದಿಂದ ಸಂಪೂರ್ಣತೆಯವರೆಗೂ ತಲುಪುವುದು ಎಂಬುದು ನಿಶ್ಚಿತವಾಗಿ ಬಿಡುತ್ತದೆ. ಬಾಪ್‌ದಾದಾ ನೋಡುತ್ತಿದ್ದಾರೆ- ನಿಶ್ಚಯ ಎಂಬುದು ಕೂಡ ವಿಧ ವಿಧವಾಗಿ ಇದೆ. ಯಥಾರ್ಥ ನಿಶ್ಚಯ ಎಂದರೆ ಸ್ವಯಂ ಅನ್ನು ಆತ್ಮಸ್ವರೂಪದಲ್ಲಿ ತಿಳಿದುಕೊಳ್ಳುವುದು, ಅಂಗೀಕರಿಸುವುದು, ನಡೆಯುವುದು ಮತ್ತು ತಂದೆಯನ್ನು ಕೂಡ ಯಾರಾಗಿದ್ದಾರೆಯೋ ಹಾಗೆಯೇ ತಿಳಿದುಕೊಳ್ಳಬೇಕು.

ಎರಡನೆಯ ವಿಧವಾದ ನಿಶ್ಚಯವುಳ್ಳವರು ಯೋಗದ ಮೂಲಕ ಸ್ವಲ್ಪ ಸಮಯದವರೆಗೆ ಅಶಾಂತಿಯಿಂದ ಶಾಂತಿಯ ಅನುಭವ ಮಾಡುತ್ತಾರೆ ಹಾಗೂ ಸ್ಥಾನದ ಶಕ್ತಿಶಾಲಿ ಶಾಂತಿಯ ವಾತಾವರಣವು ಆಕರ್ಷಣೆ ಮಾಡುತ್ತದೆ ಅಥವಾ ಬ್ರಾಹ್ಮಣ ಪರಿವಾರದಲ್ಲಿರುವ ಬ್ರಾಹ್ಮಣಾತ್ಮರ ಆತ್ಮಿಕ ಪ್ರೀತಿ ಮತ್ತು ಪವಿತ್ರತೆಯ ಜೀವನದ ಪ್ರಭಾವ ಬೀಳುತ್ತದೆ. ಸಾಂಗತ್ಯ ಚೆನ್ನಾಗಿದೆ ಅನಿಸುತ್ತದೆ. ಪ್ರಪಂಚದಲ್ಲಿರುವ ವಾಯುಮಂಡಲಕ್ಕಿಂತ ಇಲ್ಲಿಯ ಸಾಂಗತ್ಯವು ಚೆನ್ನಾಗೆನಿಸುತ್ತದೆ. ಜ್ಞಾನ, ಪರಿವಾರ, ವಾಯುಮಂಡಲ ಎಲ್ಲವೂ ಚೆನ್ನಾಗಿರುತ್ತದೆ.. ಹೀಗೆ ಚೆನ್ನಾಗಿದೆ ಎಂಬುವ ಬುನಾದಿಯ ಆಧಾರದಿಂದ ನಡೆಯುತ್ತಾ ಇರುತ್ತಾರೆ. ಇದು ಎರಡನೇ ನಂಬರ್. ಮೊದಲ ನಂಬರ್‌ನವರು ಯಥಾರ್ಥ ನಿಶ್ಚಯದಿಂದ ಇರುತ್ತಾರೆ ಮತ್ತು ಎರಡನೆಯ ನಂಬರ್‌ನವರು ಚೆನ್ನಾಗಿದೆ ಎಂದು ಬರುತ್ತಾರೆ. ಮೂರನೇಯ ನಂಬರ್‌ನವರು ಪ್ರಪಂಚದಲ್ಲಿರುವ ಸಂಬಂಧಿಕರ ದುಃಖಮಯ ವಾತಾವರಣದಿಂದ ರಕ್ಷಿಸಿಕೊಳ್ಳಲು ಎಷ್ಟು ಸಮಯ ಸೇವಾಕೇಂದ್ರದಲ್ಲಿ ಇರುತ್ತಾರೆಯೋ ಅಷ್ಟು ಸಮಯ ದುಃಖದಿಂದ ಬೇರೆಯಾಗಿ ಶಾಂತಿಯನ್ನು ಅನುಭವ ಮಾಡಿಕೊಳ್ಳುತ್ತಾರೆ. ಜ್ಞಾನದ ಗುಹ್ಯತೆಯಲ್ಲಿ ಹೋಗುವುದಿಲ್ಲ ಆದರೆ ಶಾಂತಿ ಲಭಿಸುತ್ತಿರುವ ಕಾರಣ ಒಮ್ಮೊಮ್ಮೆ ಬರುತ್ತಾರೆ ಮತ್ತು ಒಮ್ಮೊಮ್ಮೆ ಬರುವುದಿಲ್ಲ. ಆದರೆ ಯಥಾರ್ಥ ನಿಶ್ಚಯ ಬುದ್ಧಿ ಇರುವರೇ ವಿಜಯಿ ಆಗುತ್ತಾರೆ. ಮೊದಲು ಬರುವಾಗ ಅಶಾಂತಿಯಿಂದ ಬೇಸರವಾಗಿ ಶಾಂತಿಯ ಬಯಕೆಯಿಂದ ಬರುತ್ತಾರೆ. ದಾಹದಿಂದ ಇರುವವರಿಗೆ ನೀರಿನ

ಒಂದು ಬಿಂದು ಸಿಕ್ಕರೂ ಅದನ್ನು ಬಹಳ ಶ್ರೇಷ್ಠವಾಗಿ ಭಾವಿಸುತ್ತಾರೆ. ಹಾಗೆಯೇ ಅವರಿಗೆ ಅಪ್ರಾಪ್ತಿಯಿಂದ ಪ್ರಾಪ್ತಿಯು ಲಭಿಸುತ್ತದೆ. ಪರಿವಾರದಲ್ಲಿ, ಜ್ಞಾನದಲ್ಲಿ, ಯೋಗದಲ್ಲಿ, ವಾಯುಮಂಡಲದಲ್ಲಿ ಅಂತರ ಕಾಣಿಸುತ್ತದೆ. ಆದ್ದರಿಂದ ಮೊದಲು ಬಹಳ ಉತ್ಸಾಹ ಉಲ್ಲಾಸಗಳಿಂದ ನಡೆಯುತ್ತಾರೆ. ಬಹಳ ನಷೆ ಇರುತ್ತದೆ ಸಂತೋಷವೂ ಇರುತ್ತದೆ. ಆದರೆ ಒಂದು ವೇಳೆ ಮೊದಲ ನಂಬರ್‌ನ ಯಥಾರ್ಥ ನಿಶ್ಚಯದ ಬುನಾದಿ ಪಕ್ಕಾ ಇರದಿದ್ದರೆ ಎರಡನೇ, ಮೂರನೇ ನಂಬರ್‌ನ ನಿಶ್ಚಯ ಇದ್ದರೆ ನಿಧಾನವಾಗಿ ಆದಿಯಲ್ಲಿ ಇರುವ ಖುಷಿ ಮತ್ತು ಉತ್ಸಾಹದಲ್ಲಿ ಅಂತರ ಬಂದುಬಿಡುತ್ತದೆ.

ಈ ಸೀಸನ್ ನಲ್ಲಿ ಬಹಳ ಜನ ಹೊಸಬರು ಬಂದಿದ್ದಾರೆ ಅವಕಾಶ ಕೂಡ ಲಭಿಸಿದೆ. ಇದಂತೂ ಬಹಳ ಚೆನ್ನಾಗಿದೆ. ಬಾಪ್‌ದಾದಾರವರಿಗೆ ಕೂಡ ಹೊಸ ಹೊಸ ಮಕ್ಕಳನ್ನು ನೋಡಿ ಖುಷಿಯಾಗುತ್ತಿದೆ. ನೀವು ಮತ್ತೆ ನಿಮ್ಮ ಪರಿವಾರದಲ್ಲಿ ಸೇರಿಕೊಂಡಿದ್ದೀರಿ ಎಂದು. ಆದರೆ ನಿಶ್ಚಯದ ಬುನಾದಿ ಗಟ್ಟಿಯಾಗಿ ಇದೆಯೇ? ಎಂಬುದನ್ನು ಪರಿಶೀಲಿಸಿಕೊಳ್ಳಿರಿ. ನಿಮ್ಮದು ಮೊದಲ ನಂಬರ್‌ನ ನಿಶ್ಚಯವೇ ಅಥವಾ ಎರಡನೆಯ ನಂಬರ್ ನಿಶ್ಚಯವೇ? ಎಂಬುದನ್ನು ಪರಿಶೀಲಿಸಿಕೊಳ್ಳಿರಿ. ನಂಬರ್‌ವನ್ ನಿಶ್ಚಯವಿದ್ದರೆ ನಡೆಯುತ್ತಾ ನಡೆಯುತ್ತಾ ಮುಖ್ಯವಾಗಿ ಪವಿತ್ರತೆಯನ್ನು ಧಾರಣೆ ಮಾಡುವುದರಲ್ಲಿ ಕಷ್ಟ ಎನಿಸುವುದಿಲ್ಲ. ಒಂದು ವೇಳೆ ಸ್ವಪ್ನದಲ್ಲಾದರೂ ಪವಿತ್ರತೆ ಅಲುಗಾಡಿದರೆ ಅಥವಾ ಏರುಪೇರಾದರೆ ನಂಬರ್‌ವನ್ ನಿಶ್ಚಯದ ಬುನಾದಿ ಬಲಹೀನವಾಗಿ ಇದ್ದಂತೆ ಭಾವಿಸಿ. ಏಕೆಂದರೆ ಆತ್ಮನ ಸ್ವಧರ್ಮವೇ ಪವಿತ್ರತೆ. ಅಪವಿತ್ರತೆ ಎಂಬುವುದು ಪರಧರ್ಮ. ಪವಿತ್ರತೆಯೇ ಸ್ವಧರ್ಮ. ಸ್ವಧರ್ಮದಲ್ಲಿ ನಿಶ್ಚಯದಿಂದ ಇದ್ದರೆ ಪರ ಧರ್ಮ ಅಲುಗಾಡಿಸಲಾಗುವುದಿಲ್ಲ. ಕೆಲವು ಮಕ್ಕಳು ಹೇಳುತ್ತಿದ್ದಾರೆ ಆರಂಭದಲ್ಲಿ ಚೆನ್ನಾಗಿತ್ತು ಈಗ ಏನಾಗಿದೆಯೋ ತಿಳಿಯುತ್ತಿಲ್ಲ ಎಂದು. ಏನಾಗಿದೆ ಎಂದರೆ ತಂದೆ ಯಾರಾಗಿದ್ದಾರೆ, ಹೇಗಿದ್ದಾರೆ ಎಂಬುದು ಅನುಭವದಲ್ಲಿ ಬರುತ್ತಿಲ್ಲ. ತಂದೆ ಜೊತೆ ಇದ್ದಾರೆಯೇ? ಎಂದು ಕೇಳಿದರೆ ಎಲ್ಲರೂ ಕೈಯನ್ನು ಎತ್ತುತ್ತಾರೆ. ಕೈ ಎತ್ತುವುದು ಬಹಳ ಸಹಜ ಆದರೆ ತಂದೆಯು ಜೊತೆ ಇದ್ದಾರೆ. ತಂದೆಯ ಮೊಟ್ಟಮೊದಲ ಮಹಿಮೆಯಾದ ಸರ್ವ ಶಕ್ತಿವಂತನು ಎಂಬ ಮಹಿಮೆಯನ್ನು ಅಂಗೀಕರಿಸುತ್ತಿದ್ದೀರಾ ಅಥವಾ ಕೇವಲ ತಿಳಿದುಕೊಂಡಿದ್ದೀರಾ? ಸರ್ವಶಕ್ತಿವಂತನಾದ ತಂದೆ ಜೊತೆ ಇದ್ದಾಗ ಸರ್ವಶಕ್ತಿವಂತನ ಮುಂದೆ ಅಪವಿತ್ರತೆ ಬರಲು ಆಗುತ್ತದೆಯೇ? ಆಗುವುದಿಲ್ಲ. ಒಂದು ವೇಳೆ ಬರುತ್ತಿದೆ ಎಂದರೆ ಎಲ್ಲಿಂದ ಬರುತ್ತಿದೆ? ಇನ್ನೂ ಬೇರೆ ಯಾವುದಾದರೂ ಸ್ಥಳವಿದೆಯೇ? ಕಳ್ಳರು ತಾವು ಬರಲು ಪ್ರತ್ಯೇಕ ದ್ವಾರವನ್ನು ತಯಾರಿಸಿಕೊಳ್ಳುತ್ತಾರೆ. ಕಳ್ಳರ ದ್ವಾರ ಬೇರೆ ಇರುತ್ತದೆ ಹಾಗೆಯೇ ನಿಮ್ಮ ಹತ್ತಿರ ಕೂಡ ಕಳ್ಳದಾರಿ ಯಾವುದು ಇಲ್ಲ ತಾನೇ. ಎಂದು ಪರಿಶೀಲಿಸಿಕೊಳ್ಳಿರಿ. ಇಲ್ಲದಿದ್ದರೆ ಮಾಯೆ ಎಲ್ಲಿಂದ ಬಂದಿತು? ಮೇಲಿನಿಂದ ಬಂದುಬಿಟ್ಟಿತೇ? ಒಂದು ವೇಳೆ ಮೇಲಿನಿಂದ ಕೂಡ ಬರುತ್ತಿದೆ ಎಂದರೆ ಮೇಲೆಯೇ ಸಮಾಪ್ತಿ ಮಾಡಿಬಿಡಬೇಕು. ನಿಮಗೆ ತಿಳಿಯದೇ ಏನಾದರೂ ರಹಸ್ಯದ್ವಾರದಿಂದ ಬರುತ್ತಿದೆಯೇ ಎಂದು ಪರಿಶೀಲಿಸಿಕೊಳ್ಳಿ. ಯಾವ ಕಳ್ಳ ದಾರಿಯನ್ನು ತಯಾರು ಮಾಡಿಕೊಳ್ಳಲಿಲ್ಲ ತಾನೇ ಎಂದು ನೋಡಿಕೊಳ್ಳಿರಿ. ಆ ದ್ವಾರ ಕೂಡ ಹೇಗೆ ತಯಾರು ಮಾಡಿಕೊಳ್ಳುತ್ತದೆಯೋ ತಿಳಿದಿದೆಯೇ? ನಿಮ್ಮಲ್ಲಿ ವಿಶೇಷವಾಗಿ ಯಾವ ಸ್ವಭಾವ ಅಥವಾ ಸಂಸ್ಕಾರವು ಬಲಹೀನವಾಗಿ ಇರುತ್ತದೆಯೋ ಅದನ್ನೇ ಮಾಯೆಯು ತನ್ನ ದ್ವಾರವನ್ನಾಗಿ ಮಾಡಿಕೊಳ್ಳುತ್ತದೆ. ಏಕೆಂದರೆ ಯಾವುದಾದರೂ ಬಲಹೀನ ಸ್ವಭಾವ ಸಂಸ್ಕಾರಗಳು ಇದ್ದರೆ ನೀವು ಆ

ದ್ವಾರವನ್ನು ಎಷ್ಟು ಮುಚ್ಚಿದರೂ ಅದು ಮುಚ್ಚಿಕೊಳ್ಳುವುದಿಲ್ಲ. ಏಕೆಂದರೆ ದ್ವಾರವು ಬಲಹೀನವಾಗಿರುತ್ತದೆ. ಮಾಯೆಗೆ ಎಲ್ಲವೂ ತಿಳಿದಿದೆ. ಈ ದ್ವಾರ ಬಲಹೀನವಾಗಿ ಇದೆ ಇದರಿಂದ ಮಾರ್ಗ ಸಿಗಬಹುದು ಮತ್ತು ಸಿಗುತ್ತದೆ ಕೂಡ ಎಂದು. ನಡೆಯುತ್ತಾ ನಡೆಯುತ್ತಾ ಅಪವಿತ್ರತೆಯ ಸಂಕಲ್ಪಗಳು ಕೂಡ ಬರುತ್ತವೆ. ಮಾತು ಮತ್ತು ಕರ್ಮ ಕೂಡ ಆಗುತ್ತದೆ. ಅರ್ಥಾತ್ ದ್ವಾರ ತೆರೆದಿರುವ ಕಾರಣದಿಂದಲೇ ಮಾಯೆಯು ಬಂದಿದೆ. ಹಾಗಾದರೆ ತಂದೆ ಹೇಗೆ ಜೊತೆ ಇದ್ದ ಹಾಗಾಯಿತು? ಸರ್ವಶಕ್ತಿವಂತನು ಜೊತೆ ಇದ್ದಾರೆ ಎಂದು ಹೇಳುವುದಂತೂ ಹೇಳುತ್ತಿದ್ದೀರಿ ಮತ್ತೆ ಈ ಬಲಹೀನತೆ ಎಲ್ಲಿಂದ ಬಂದಿತು ಬಲಹೀನತೆ ಇರಬಲ್ಲದೇ? ಇರಲಾಗುವುದಿಲ್ಲ ತಾನೇ. ಹಾಗಾದರೆ ಏಕೆ ಇರುತ್ತದೆ? ಪವಿತ್ರತೆಯಲ್ಲಿ ಯಾವುದಾದರೂ ವಿಕಾರವಾದರೂ, ಲೋಭವಾದರೂ ಆಗಬಹುದು. ಕೇವಲ ತಿನ್ನುವುದರಲ್ಲಿ, ಕುಡಿಯುವುದರಲ್ಲಿ ಅಲ್ಲ. ಕೆಲವರು ನನಗೆ ಧರಿಸುವುದರಲ್ಲಿ, ತಿನ್ನುವುದರಲ್ಲಿ, ಕುಡಿಯುವುದರಲ್ಲಿ ಆಕರ್ಷಣೆ ಇಲ್ಲ. ಏನಿದ್ದರೂ, ಏನು ತಯಾರು ಮಾಡಿದರೆ ಅದನ್ನೇ ತಿಂದುಬಿಡುತ್ತಿದ್ದೇನೆ. ಎಂದುಕೊಳ್ಳುತ್ತಿದ್ದಾರೆ ಆದರೆ ಮುಂದಕ್ಕೆ ಹೋಗುತ್ತಿದ್ದ ಹಾಗೆ ಮಾಯೆಯು ರಾಯಲ್ ರೂಪದಲ್ಲಿ ಮತ್ತು ಸೂಕ್ಷ್ಮ ರೂಪದಲ್ಲಿ ಲೋಭವನ್ನು ತರುತ್ತದೆ ಆದರೆ ಆ ರಾಯಲ್ ಲೋಭ ಎಂದರೇನು? ವಿದ್ಯಾರ್ಥಿಯಾದರೂ, ಟೀಚರ್ ಆದರೂ ಇಬ್ಬರಲ್ಲಿ ಕೂಡ ಮಾಯೆಯು ರಾಯಲ್ ಲೋಭ ತರಲು ಪೂರ್ಣವಾಗಿ ಪ್ರಯತ್ನ ಮಾಡುತ್ತದೆ. ಒಂದುವೇಳೆ ಯವುದಾದರೂ ಓಬ್ಬ ವಿದ್ಯಾರ್ಥಿ ತುಂಬಾ ಒಳ್ಳೆಯ ನಿಶ್ಚಯ ಬುದ್ಧಿಯವರಾಗಿದ್ದರೆ, ಸೇವಾಧಾರಿಯಾಗಿದ್ದರೆ, ಎಲ್ಲದರಲ್ಲಿಯೂ ಚೆನ್ನಾಗಿದ್ದರೆ, ಅವರು ಮುಂದೆ ಹೋದಂತೆ ಈ ರಾಯಲ್ ಲೋಭವು ಹೇಗೆ ಬರುತ್ತದೆ ಎಂದರೆ ಇಷ್ಟೆಲ್ಲಾ ಮಾಡುತ್ತೇನೆ, ಎಲ್ಲಾ ರೂಪದಿಂದಲೂ ಸಹಾಯಕನಾಗಿದ್ದೇನೆ, ತನುವಿನಿಂದ, ಮನಸ್ಸಿನಿಂದ, ಧನದಿಂದ ಹಾಗೂ ಯಾವ ಸಮಯದಲ್ಲಿ ಬೇಕೋ ಆ ಸಮಯದಲ್ಲಿ ಸೇವೆಯಲ್ಲಿ ಹಾಜರಾಗಿ ಬಿಡುತ್ತೇನೆ. ಆದರೂ ಸಹ ನನ್ನ ಹೆಸರನ್ನು ಶಿಕ್ಷಕಿಯು ವರ್ಣನೆ ಮಾಡುವುದಿಲ್ಲ. ಈ ವಿದ್ಯಾರ್ಥಿ ತುಂಬಾ ಉತ್ತಮರಾಗಿದ್ದಾರೆ ಎಂದು ಹೇಳುವುದಿಲ್ಲ ಎಂದು ಭಾವಿಸುತ್ತಾರೆ. ಒಂದುವೇಳೆ ಈ ಸಂಕಲ್ಪವು ಬರದಿದ್ದರೂ ಇನ್ನೊಂದು ರೂಪದಲ್ಲಿ ಬರುತ್ತದೆ. ಒಂದುವೇಳೆ ಶಿಕ್ಷಕಿಯು ಪ್ರಶಂಸೆ ಮಾಡಿಬಿಟ್ಟರೆ ತನ್ನ ಹೆಸರನ್ನು ಕೇಳುತ್ತಾ ಕೇಳುತ್ತಾ ನಾನೇ ಉತ್ತಮ ವಿದ್ಯಾರ್ಥಿ ಆಗಿದ್ದೇನೆ, ನಾನೇ ಸೇವೆ ಮಾಡುತ್ತೇನೆ, ನಾನೇ ಇದನ್ನೆಲ್ಲಾ ಮಾಡಬಲ್ಲೆನು ಎನ್ನುವ ಅಭಿಮಾನದ ರೂಪದಲ್ಲಿ ಬಂದು ಬಿಡುತ್ತದೆ ಅಥವಾ ತುಂಬಾ ಕೆಲಸಕಾರ್ಯ ಮಾಡಿಬಂದರೆ, ಯಾರೂ ಅವರನ್ನು ವಿಚಾರಿಸದಿದ್ದರೆ, ಒಂದು ಲೋಟ ನೀರನ್ನೂ ಕೊಡದಿದ್ದರೆ, ಇವರ ಕಡೆ ಗಮನವನ್ನೇ ಕೊಡದಿದ್ದರೆ, ತಮ್ಮ ಕೆಲಸದಲ್ಲಿ ವ್ಯಸ್ತರಾಗಿದ್ದರೆ, ಕೆಲಸ ಮಾಡಿ ಬಂದರೂ ಯಾರೂ ಕೇಳದಿದ್ದರೆ, ಸೇವೆ ಮಾಡುವುದು ಅಥವಾ ಮಾಡದಿರುವುದು ಸಮಾನವಾಗಿಬಿಡುತ್ತದೆ. ಇಲ್ಲಿ ಕೇಳುವವರು ಯಾರೂ ಇಲ್ಲ. ಇದಕ್ಕಿಂತಲೂ ಮನೆಯಲ್ಲಿ ನೆಮ್ಮದಿಯಿಂದ ಇರುವುದು ಒಳ್ಳೆಯದು ಎಂದು ತಿಳಿದುಕೊಳ್ಳುತ್ತಾರೆ. ಯಾವಾಗ ಬೇಕಾದರೆ ಆಗ ಸೇವೆಯನ್ನು ಮಾಡಬಹುದು ಎಂಬ ವಿಚಾರವು ಬರುತ್ತದೆ. ಹೀಗೆ ಈ ಭಿನ್ನ ಭಿನ್ನ ಪ್ರಕಾರದ ವಿಕಾರಗಳ ರಾಯಲ್ ರೂಪವು ಬರುತ್ತದೆ. ಹಾಗೂ ಒಂದು ವಿಕಾರವು ಬಂದುಬಿಟ್ಟರೆ ಲೋಭ ಬರದಿದ್ದರೆ ಅಭಿಮಾನವು ಬಂದು ಬಿಡಬಹುದು ಅಥವಾ ತನಗೆ ಮಾನ್ಯತೆಯು ದೊರೆಯಬೇಕು ಎನ್ನುವ ವಿಚಾರವು ಬಂದು ಬಿಡಬಹುದು. ಆಗ ಎಲ್ಲಿ ವಿಕಾರವು ಬರುತ್ತದೆಯೋ ಅಲ್ಲಿ ಅದರ ನಾಲ್ಕು ಜೊತೆಗಾರರು ಗುಪ್ತ ರೂಪದಲ್ಲಿ ಇರುತ್ತವೆ. ಹಾಗೂ ಒಂದು ವಿಕಾರಕ್ಕೆ ನೀವು ಅವಕಾಶ ನೀಡಿದರೆ, ಯಾವ ವಿಕಾರಗಳು ಗುಪ್ತವಾಗಿವೆಯೋ ಅವು ಸಹ ಸಮಯಾನುಸಾರವಾಗಿ ತಮ್ಮ ಅವಕಾಶವನ್ನು

ತೆಗೆದುಕೊಳ್ಳುತ್ತಾ ಇರುತ್ತವೆ. ಆಮೇಲೆ ಏನು ಹೇಳುತ್ತಾರೆಂದರೆ ಮೊದಲಿನ ಸಮಾನ ನೆಶೆಯು ಈಗ ಇಲ್ಲ ಎಂದು. ಮೊದಲು ತುಂಬಾ ಉತ್ತಮವಾದ ನಶೆಯಿತ್ತು. ಮೊದಲಿನ ಅವಸ್ಥೆಯು ತುಂಬಾ ಉತ್ತಮವಾಗಿತ್ತು. ಈಗ ಏನಾಗಿಬಿಟ್ಟಿದೆಯೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಏನಾಗಿಬಿಟ್ಟಿತೋ ಗೊತ್ತಿಲ್ಲವೇ? ಮಾಯೆಯು ಕಳ್ಳದ್ವಾರದ ಮೂಲಕ ಬಂದು ಬಿಟ್ಟಿತು. ಇದು ವಾಸ್ತವಿಕ ಸಂಗತಿಯಾಗಿದೆ. ಗೊತ್ತಿಲ್ಲವೆಂದು ಹೇಳಬೇಡಿರಿ.

ಹಾಗೂ ಶಿಕ್ಷಕಿಯರಿಗೂ ಮಾಯೆಯು ಬರುತ್ತದೆ. ಕೇವಲ ವಿದ್ಯಾರ್ಥಿಗಳಿಗೆ ಮಾತ್ರವೇ ಬರುವುದಿಲ್ಲ. ಶಿಕ್ಷಕಿಯರಿಗೆ ಏನು ಬೇಕು? ಸೇವಾಕೇಂದ್ರವು ಚೆನ್ನಾಗಿರಬೇಕು. ಬಟ್ಟೆಗಳು ಹೇಗಿದ್ದರೂ ಪರವಾಗಿಲ್ಲ. ಆದರೆ ಸೇವಾಕೇಂದ್ರವು ಸ್ವಲ್ಪ ಇರಲು ಯೋಗ್ಯವಾಗಿ ಚೆನ್ನಾಗಿರಬೇಕು ಹಾಗೂ ಜೊತೆಯಿರುವವರು ಒಳ್ಳೆಯವರಾಗಿರಬೇಕು. ವಿದ್ಯಾರ್ಥಿಗಳು ಉತ್ತಮರಾಗಿರಬೇಕು. ಬಾಬಾರವರ ಭಂಡಾರವು ಉತ್ತಮವಾಗಿರಬೇಕು. ಒಂದುವೇಳೆ ಉತ್ತಮ ವಿದ್ಯಾರ್ಥಿಯು ಎಲ್ಲಿಯಾದರೂ ವರ್ಗವಾಗಿ ಹೋದರೆ ಎದೆಯು ಸ್ವಲ್ಪ ಡವಗುಟ್ಟುತ್ತದೆ. ಆಮೇಲೆ ಏನು ಮಾಡುವುದು, ಇವರು ಸಹಾಯಕರಾಗಿದ್ದರಲ್ಲವೇ. ಈಗ ಅವರು ಹೋಗಿಬಿಟ್ಟರು ಎಂದು ಯೋಚಿಸುತ್ತಾರೆ. ಸಹಾಯಕರು ವಿದ್ಯಾರ್ಥಿಗಳೋ ಅಥವಾ ತಂದೆಯೋ? ಆ ಸಮಯದಲ್ಲಿ ಯಾರು ಬುದ್ದಿಯಲ್ಲಿ ಬರುತ್ತಾರೆ? ವಿದ್ಯಾರ್ಥಿಯೋ ಅಥವಾ ತಂದೆಯೋ? ಹೀಗೆ ರಾಯಲ್ ಮಾಯೆಯು ನಿಶ್ಚಯದ ಬುನಾದಿಯನ್ನು ಅಲುಗಾಡಿಸಲು ಪ್ರಯತ್ನ ಮಾಡುತ್ತದೆ. ಒಂದುವೇಳೆ ಸರ್ವಶಕ್ತಿವಂತ ತಂದೆಯು ಜೊತೆಯಲ್ಲಿ ಇದ್ದಾರೆ ಎನ್ನುವ ನಿಶ್ಚಯವು ನಿಮಗೆ ಇದ್ದರೆ ತಂದೆಯು ಯಾರನ್ನಾದರೂ ನಿಮಿತ್ತ ಮಾಡಿಯೇ ಮಾಡುತ್ತಾರೆ. ಅವಕಾಶವು ದೊರೆಯಬೇಕು ಎನ್ನುವ ಇಚ್ಛೆಯನ್ನು ಇಟ್ಟುಕೊಳ್ಳಬೇಡಿರಿ. ಕನಿಷ್ಠಪಕ್ಷ ಒಂದು ಸಲ ಅಬೂವಿನ ಕನ್‌ಫರೆನ್ಸ್ ನಲ್ಲಿ ಅಥವಾ ದೊಡ್ಡ ಸಮ್ಮೇಳನದಲ್ಲಿ ಅವಕಾಶ ಸಿಗಲಿ. ಇದೇನೂ ಇಲ್ಲದಿದ್ದರೂ ಯೋಗ ಶಿಬಿರವನ್ನಾದರೂ ಮಾಡಿಸಬೇಕು. ಈ ಅವಕಾಶವೂ ದೊರೆಯಬೇಕಲ್ಲವೇ. ಭಾಷಣ ಮಾಡದಿದ್ದರೂ ಸ್ಟೇಜಿನ ಮೇಲೆಯಾದರೂ ಬರಬೇಕು. ಕೊನೆಯಲ್ಲಿ ವಿನಾಶವಾಗಿ ಬಿಡುವುದು. ವಿನಾಶದವರೆಗೂ ನನಗೆ ಅವಕಾಶವು ಸಿಗುವುದಿಲ್ಲವೇ. ಅವಕಾಶವಂತೂ ದೊರೆಯಬೇಕಲ್ಲವೇ. ನನ್ನ ಸರದಿಯು ಬರಬೇಕಲ್ಲವೇ. ಆದರೆ ಮುಂಚೆಯೂ ಸಹ ಬಾಪ್‌ದಾದಾರವರು ಏನು ತಿಳಿಸಿಕೊಟ್ಟಿದ್ದಾರೆ? ಒಂದುವೇಳೇ ಸ್ಟೇಜ್ ಮೇಲೆ ನಿಮ್ಮ ಸರದಿಯು ಬಂದುಬಿಟ್ಟರೆ, ಯೋಗ್ಯರಾಗಿದ್ದರೆ, ಅವಕಾಶವು ದೊರೆತರೆ ಖುಷಿಯಿಂದ ನಿಮ್ಮ ಪಾತ್ರವನ್ನು ನಿರ್ವಹಿಸಿರಿ. ಆದರೆ ಈ ಸಂಕಲ್ಪವನ್ನು ಮಾಡುವುದೂ ಸಹ ಬೇಡುವುದಾಗಿದೆ. ಬೇಕು ಬೇಕು ಎನ್ನುವುದು ರಾಯಲ್ ಬೇಡಿಕೆಯಾಗಿದೆ. ವಿದ್ಯಾರ್ಥಿಯೇ ಆಗಿರಲಿ, ಶಿಕ್ಷಕಿಯೇ ಆಗಿರಲಿ ಇದು ಆಗಬೇಕು ಎನ್ನುವುದೇ ನಿಮ್ಮ ಪರಿಚಯವಲ್ಲ. ಏನು ಫೈನಲ್ ನಂಬರ್ (ಅಂತಿಮ ಸ್ಥಾನವು) ದೊರೆಯುತ್ತದೆಯೋ ಅದು ಯಾವಾಗಲೂ ಇವರು ಎಷ್ಟು ಭಾಷಣ ಮಾಡಿದರು ಅಥವಾ ಇವರು ಎಷ್ಟು ವಿದ್ಯಾರ್ಥಿಗಳನ್ನು ರಚನೆ ಮಾಡಿದ್ದಾರೆ, ಎಷ್ಟು ಸೇವಾಕೇಂದ್ರಗಳನ್ನು ತಯಾರು ಮಾಡಿದ್ದಾರೆ ಎನ್ನುವುದನ್ನು ಅವಲಂಬಿಸುವುದಿಲ್ಲ. ಆದರೆ ಎಷ್ಟು ಆತ್ಮರನ್ನು ಯೋಗ್ಯರನ್ನಾಗಿ ಮಾಡಿದ್ದಾರೆ. 30 ಸೇವಾಕೇಂದ್ರಗಳ ಇನ್‌ಚಾರ್ಜ್ (ಮೇಲ್ವಿಚಾರಕರು) ಆಗಿದ್ದಾರೆ ಎಂದು ಹೆಸರುವಾಸಿಯಾಗಿ ಬಿಡುತ್ತಾರೆ. ಸೇವಾ ಕೇಂದ್ರವನ್ನು ಸ್ಥಾಪನೆ ಮಾಡುವುದು ದೊಡ್ಡ ಸಂಗತಿಯಲ್ಲ. ಆದರೆ ಎಷ್ಟು ಆತ್ಮರನ್ನು ಯೋಗ್ಯರನ್ನಾಗಿ ಮಾಡಿದ್ದಾರೆ ಎನ್ನುವುದು ಮುಖ್ಯವಾಗಿದೆ. 30

ಸೇವಾಕೇಂದ್ರಗಳ ಮೇಲ್ವಿಚಾರಕರಾಗಿದ್ದಾರೆಂದು ಹೆಸರು ಬಂದುಬಿಟ್ಟಿತು. ಆದರೆ 30ರಲ್ಲಿ ಆ 15 ಸೇವಾಕೇಂದ್ರಗಳು ಅಲುಗಾಡುತ್ತಾ ಇದ್ದರೆ 15 ಸೇವಾಕೇಂದ್ರಗಳು ಸರಿಯಾಗಿದ್ದರೆ ಏನಾಯಿತು? ಲಾಭವಾಯಿತೋ ಅಥವಾ ಕೇವಲ ಹೆಸರು ಬಂದಿತೋ ಇಂತಹವರು 30 ಸೇವಾಕೇಂದ್ರಗಳನ್ನು ತೆರೆದಿದ್ದಾರೆಂದು ಕೇವಲ ಹೆಸರು ಪ್ರಖ್ಯಾತವಾಗುತ್ತದೆ ಆದರೆ ಇದರಿಂದ ಸ್ಥಾನವು ಸಿಗುವುದಿಲ್ಲ. ಎಷ್ಟು ಆತ್ಮರಿಗೆ ಸುಖವನ್ನು ಕೊಟ್ಟಿದ್ದೀರಿ, ಎಷ್ಟು ಸ್ವಯಂ ಶಕ್ತಿಶಾಲಿಯಾಗಿದ್ದೀರಿ ಎನ್ನುವುದರ ಮೇಲೆ ನಂಬರ್ ದೊರೆಯುತ್ತದೆ. ಆದ್ದರಿಂದ ಈ ಬೇಕು, ಬೇಕು ಎನ್ನುವುದನ್ನೂ ಸಮಾಪ್ತಿ ಮಾಡಿಬಿಡಿ. ಇಲ್ಲದಿದ್ದರೆ ಯೋಗವು ಆಗುವುದಿಲ್ಲ. ಪ್ರತಿದಿನವೂ ಇಂತಹ ಸ್ಥಳದಲ್ಲಿ ಕಾರ್ಯಕ್ರಮವು ಆಯಿತು. ಆದರೂ ನನ್ನನ್ನು ಕರೆಯಲಿಲ್ಲ. ನಿನ್ನೆ ಅಲ್ಲಿ ಆಯಿತು, ಮೊನ್ನೆ ಅಲ್ಲಿ ಆಯಿತು. ಆದರೂ ನನ್ನನ್ನು ಕರೆಯಲಿಲ್ಲ ನಿನ್ನೆ ಅಲ್ಲಿ ಆಯಿತು. ಮೊನ್ನೆ ಅಲ್ಲಿ ಆಯಿತು ಎಂದು ಯೋಚಿಸುತ್ತಾ ಇದ್ದರೆ ಯೋಗವು ಆಗುತ್ತದೆಯೋ ಅಥವಾ ಎಣಿಕೆಯಾಯಿತೇ?

ಮುಖ್ಯವಾದ ವಿಷಯವೇನೆಂದರೆ ಯಥಾರ್ಥವಾದ ನಿಶ್ಚಯವೇನಿದೆಯೋ ಅದನ್ನು ಪಕ್ಕಾ ಮಾಡಿಕೊಳ್ಳಿರಿ. ಹೇಳುವುದೇನೋ ನಾನು ಆತ್ಮನಾಗಿದ್ದೇನೆ. ಹಾಗೂ ತಂದೆಯು ಸರ್ವಶಕ್ತಿವಂತ ಆಗಿದ್ದಾರೆ ಎಂದು ಹೇಳಿಬಿಡುತ್ತೀರಿ. ಆದರೆ ಇದು ನಿತ್ಯ ಜೀವನದಲ್ಲಿ ಕರ್ಮದಲ್ಲಿ ಬರಬೇಕು. ನನ್ನನ್ನು ಮಾಯೆಯು ಅಲುಗಾಡಿಸುತ್ತಾ ಇದೆ ಆದರೆ ನನ್ನ ತಂದೆಯು ಸರ್ವಶಕ್ತಿವಂತರಾಗಿದ್ದಾರೆಂದು ಹೇಳಿದರೆ ಯಾರು ನಂಬುತ್ತಾರೆ? ಏಕೆಂದರೆ ಅವರಿಗಿಂತ ಯಾರೂ ಶ್ರೇಷ್ಠರಲ್ಲ. ಆದರೆ ಬಾಪ್‌ದಾದಾ ಇಂದು ನಿಶ್ಚಯದ ಬುನಾದಿಯನ್ನು ನೋಡುತ್ತಿದ್ದಾರೆ ಹಳೆಯ ವಿದ್ಯಾರ್ಥಿಗಳಾದರೂ, ಹೊಸಬರಾದರು ಈ ನಿಶ್ಚಯದ ಬುನಾದಿಯನ್ನು ಪ್ರತ್ಯಕ್ಷದಲ್ಲಿ ತನ್ನಿರಿ ಮತ್ತು ಸಮಯಾನುಸಾರ ಉಪಯೋಗಿಸಿರಿ. ಸಮಯವಾದ ನಂತರ ತಂದೆಯ ಮುಂದೆ ಪಶ್ಚಾತ್ತಾಪ ರೂಪದಲ್ಲಿ ಬರುತ್ತಿದ್ದಾರೆ. ಏನು ಮಾಡುವುದು, ಬಾಬಾ ಹೀಗಾಗಿ ಹೋಯಿತು, ನೀವು ದಯಾ ಹೃದಯಿ ಅಲ್ಲವೇ, ನನ್ನ ಮೇಲೆ ದಯೆ ತೋರಿಸಿರಿ...ಎನ್ನುತ್ತಿದ್ದಾರೆ. ಹಾಗಾದರೆ ಇದೇನಾಯಿತು? ಇದೂ ಸಹ ರಾಯಲ್ ಪಶ್ಚಾತ್ತಾಪವಾಗಿದೆ. ತಂದೆಯು ಜೊತೆಯಲ್ಲಿದ್ದರೆ ಯಾರಿಗೂ ನಿಮ್ಮ ಹತ್ತಿರ ಬರುವ ಸಾಹಸ ಇರುವುದಿಲ್ಲ. ನಿಶ್ಚಯ ಬುದ್ಧಿಯ ಅರ್ಥವೇ ಏನಾಗಿದೆಯೆಂದರೆ ವಿಜಯಶಾಲಿ ಆಗುವುದು ಒಂದುವೇಳೆ ಏನಾದರೂ ಲೆಕ್ಕಾಚಾರವು ಬಂದರೆ, ಮನಸ್ಸನ್ನು ಚಂಚಲ ಮಾಡಿಕೊಳ್ಳಬೇಡಿರಿ. ಸ್ಥಿತಿಯನ್ನು ಏರುಪೇರು ಮಾಡಿಕೊಳ್ಳಬೇಡಿರಿ. ಏನು ಬರುತ್ತದೆಯೋ ಅದನ್ನು ತಕ್ಷಣವೇ ದೂರದಿಂದಲೇ ವಿನಾಶ ಮಾಡಿಬಿಡಿ ಈಗ ಯೋಧರಾಗಬೇಡಿರಿ. ಅನೇಕರು ಇನ್ನೂ ನಿರಂತರ ಯೋಗಿ ಆಗಿಲ್ಲ. ಸ್ವಲ್ಪ ಸಮಯ ಯೋಗಿಯಾಗಿರುತ್ತಾರೆ ಹಾಗೂ ಸ್ವಲ್ಪ ಸಮಯ ಯುದ್ಧ ಮಾಡುವ ಯೋಧರಾಗಿರುತ್ತಾರೆ. ನೀವು ನಿಮ್ಮನ್ನು ಏನೆಂದು ಹೇಳಿಕೊಳ್ಳುತ್ತೀರಿ' ಯೋಧರೆಂದೋ ಅಥವಾ ಯೋಗಿಯೆಂದೋ? ಹೇಳಿಕೊಳ್ಳುವುದೇನೋ ಸಹಜಯೋಗಿ ಎಂದು ಆದ್ದರಿಂದ ಯಾರು- ಯಾರು ಹೊಸಬರು ಬಂದಿದ್ದಾರೆಯೋ ಅವರಿಗೆ ಬಾಪ್‌ದಾದಾರವರು ಪುನಃ ಭಾಗ್ಯವನ್ನು ಪ್ರಾಪ್ತಿ ಮಾಡಿಕೊಂಡಿರುವ ಸಲುವಾಗಿ ಅಭಿನಂದನೆ ನೀಡುತ್ತಾರೆ. ಜೊತೆಯಲ್ಲಿ ಏನು ಪರಿಶೀಲನೆ ಮಾಡಿಕೊಳ್ಳಬೇಕೆಂದರೆ ಬುನಾದಿ ನಂಬರ್‌ವನ್ ಆಗಿದೆಯೋ ಅಥವಾ ನಂಬರ್ ಟೂ ಆಗಿದೆಯೋ ಎಂದು. ಜ್ಞಾನ ಯೋಗವು ತುಂಬಾ ಇಷ್ಟವಾಗುತ್ತದೆಯೆಂದು ಅನೇಕರು ಹೇಳುತ್ತಾರೆ. ಆದರೆ ಜ್ಞಾನವನ್ನು ಉಪಯೋಗಿಸಿಕೊಳ್ಳುತ್ತೀರಾ? ಚೆನ್ನಾಗಿದೆ ಎನ್ನುವುದೇನೋ ಸರಿ. ಆದರೆ ಕರ್ಮದಲ್ಲಿ ತರುತ್ತೀರಾ?

ಜ್ಞಾನವೆಂದರೆ ಆತ್ಮ, ಪರಮಾತ್ಮ,ಡ್ರಾಮಾ(ನಾಟಕ) ಎಂದು ಹೇಳುವುದಲ್ಲ. ಜ್ಞಾನದ ಅರ್ಥವು ತಿಳುವಳಿಕೆ ಆಗಿದೆ. ತಿಳಿವಳಿಕೆಯುಳ್ಳವರು ಎಂತಹ ಸಮಯವಾಗಿದೆಯೋ ಅಂತಹ ತಿಳಿವಳಿಕೆಯಿಂದ ಸದಾ ಸಫಲರಾಗುತ್ತಾರೆ. ಯಾವಾಗಲಾದರೂ ಜೀವನದಲ್ಲಿ ದುಃಖವು ಬಂದರೆ ಏನು ವಿಚಾರ ಮಾಡುತ್ತೀರಿ? ನನಗೆ ಇದು ಏಕೆ ಅರಿವಾಗಲಿಲ್ಲವೋ ಗೊತ್ತಿಲ್ಲ... ಇದನ್ನೇ ಹೇಳುತ್ತೀರಿ. ಹಾಗಾದರೆ ನೀವು ತಿಳಿವಳಿಕೆಯುಳ್ಳವರಾಗಿದ್ದೀರಾ. ಜ್ಞಾನಿಯಾಗಿದ್ದೀರಾ? ಹೌದು ಅಥವಾ ಇಲ್ಲ ಎಂದು ಹೇಳಿರಿ. ಹೌದು ಎಂದೇನೋ ತುಂಬಾ ಚೆನ್ನಾಗಿ ಹೇಳುತ್ತೀರಿ. ತಿಳಿವಳಿಕೆಯುಳ್ಳವರ ಚಿಹ್ನೆ ಅಥವಾ ಲಕ್ಷಣವು ಎಂದೂ ಮೋಸ ಹೋಗದಿರುವುದಾಗಿದೆ. ಇದು ಜ್ಞಾನಿಯ ಲಕ್ಷಣವಾಗಿದೆ. ಹಾಗೂ ಯೋಗಿಯ ಲಕ್ಷಣವು ಸದಾ ಸ್ವಚ್ಛ ಹಾಗೂ ಸ್ಪಷ್ಟ ಬುದ್ಧಿಯದಾಗಿದೆ. ಸ್ವಚ್ಛವೂ ಆಗಿರಬೇಕು ಸ್ಪಷ್ಟವೂ ಆಗಿರಬೇಕು. ಗೊತ್ತಿಲ್ಲ, ಗೊತ್ತಿಲ್ಲ ಎಂದು ಯೋಗಿಯು ಎಂದೂ ಹೇಳುವುದಿಲ್ಲ. ಅವರ ಬುದ್ಧಿಯು ಸದಾ ಸ್ಪಷ್ಟವಾಗಿರುತ್ತದೆ. ಹಾಗೂ ಧಾರಣಾ ಸ್ವರೂಪದ ಲಕ್ಷಣವು ಸದಾ ಸ್ವಯಂ ತಾವೂ ಸಹ ಡಬ್ಬಲ್ ಲೈಟ್ ಆಗಿರುವುದು. ಎಷ್ಟೇ ಜವಾಬ್ದಾರಿಯಿದ್ದರೂ ಧಾರಣಾಮೂರ್ತಿಯು ಸದಾ ಡಬ್ಬಲ್ ಲೈಟ್ ಆಗಿರುವರು. ಮೇಳವೇ ನಡೆಯುತ್ತಿರಲಿ, ಅಥವಾ ಗಲಭೆ ಗೊಂದಲವು ನಡೆಯುತ್ತಿರಲಿ ಎರಡರಲ್ಲಿಯೂ ಡಬಲ್ ಲೈಟ್ ಆಗಿರುತ್ತಾರೆ ಹಾಗೂ ಸೇವಾಧಾರಿಯ ಲಕ್ಷಣವು ಸದಾ ನಿಮಿತ್ತಭಾವ ಹಾಗೂ ನಿರ್ಮಾಣಭಾವವಾಗಿದೆ. ಆದ್ದರಿಂದ ಈ ಎಲ್ಲಾ ಲಕ್ಷಣಗಳೂ ನನ್ನಲ್ಲಿದೆಯೇ? ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಹೇಳುವುದೇನೋ ಎಲ್ಲರೂ ಹೇಳುತ್ತೀರಲ್ಲವೇ! ನಾಲ್ಕೂ ಸಬ್ಜೆಕ್ಟ್‌ಗಳ (ವಿಷಯ) ಈಶ್ವರೀಯ ವಿದ್ಯಾರ್ಥಿ ಆಗಿದ್ದೇವೆ ಎಂದು ಆದ್ದರಿಂದ ಲಕ್ಷಣಗಳು ಕೂಡಾ ಕಂಡುಬರಬೇಕು.

ಹಾಗಾದರೆ ಯಾರು ಹೊಸ ಹೊಸದಾಗಿ ಬಂದಿದ್ದೀರೋ ಏನು ಮಾಡುವಿರಿ? ನಿಮ್ಮ ನಿಶ್ಚಯವನ್ನು ಇನ್ನೂ ಪಕ್ಕಾ ಮಾಡಿಕೊಳ್ಳಿರಿ. ಇಲ್ಲದಿದ್ದರೆ ಏನಾಗುತ್ತದೆಯೆಂದರೆ ಎರಡು ವರ್ಷಗಳವರೆಗೆ ನಡೆಯುತ್ತೀರಿ. ಮೂರು ವರ್ಷಗಳವರೆಗೆ ನಡೆಯುತ್ತೀರಿ. ಆಮೇಲೆ ವಾಪಸ್ಸು ಹಳೆಯ ಪ್ರಪಂಚದಲ್ಲಿ ಹೋಗಿಬಿಡುತ್ತೀರಿ. ಹಾಗೂ ಯಾರು ವಾಪಸ್ಸು ಹೋಗಿ ಬಿಡುತ್ತಾರೋ ಅವರು ಆ ಪ್ರಪಂಚದಲ್ಲಿಯೂ ಸೆಟ್ ಆಗಲು (ಹೊಂದಿಕೊಳ್ಳಲು) ಸಾಧ್ಯವಾಗುವುದಿಲ್ಲ. ಆ ಪ್ರಪಂಚದವರಾಗಿಯೂ ಇರುವುದಿಲ್ಲ. ಈ ಪ್ರಪಂಚದವರಾಗಿಯೂ ಇರುವುದಿಲ್ಲ. ಆದ್ದರಿಂದ ನಿಮ್ಮ ಬುನಾದಿಯನ್ನು (ಫೌಂಡೇಷನ್) ತುಂಬಾ ಪಕ್ಕಾ ಮಾಡಿಕೊಳ್ಳಿರಿ, ಸರ್ವಶಕ್ತಿವಂತರಾದ ತಂದೆಯು ಜೊತೆಯಲ್ಲಿದ್ದಾರೆ ಎನ್ನುವ ಅನುಭವ ಮಾಡಿರಿ. ಈ ಒಂದು ಅನುಭವವನ್ನು ಮಾಡಿದರೂ ಸಾಕು ಎಲ್ಲದರಲ್ಲಿಯೂ ಪಾಸಾಗಿ (ತೇರ್ಗಡೆಯಾಗಿ) ಬಿಡುವಿರಿ. ಪ್ರಾಪಂಚದ ಪ್ರಧಾನ ಮಂತ್ರಿಗಳ ಜೊತೆಯಿದ್ದರೂ ಎಷ್ಟು ನಶೆಯಿರುತ್ತದೆ. ಬಾಬಾರವರಂತೂ ಸರ್ವಶಕ್ತಿವಂತರಾಗಿದ್ದಾರೆ.

ಯಾರು ಮೊದಲನೆಯ ಸಲ ಬಂದಿದ್ದೀರೋ ಅವರು ಕೈ ಎತ್ತಿರಿ. ಯಾರು ಈ ಕಲ್ಪದಲ್ಲಿ ಮೊದಲನೆಯ ಸಲ ಬಂದಿದ್ದೀರೋ ಅವರು ಸದಾ ಖುಷಿಯಾಗಿರಿ ಹಾಗೂ ಸದಾ ಪ್ರಾಪ್ತಿ ಸಂಪನ್ನರಾಗಿರಿ. ಶಿಕ್ಷಕಿಯರು ಅನೇಕರು ಬರುತ್ತಾರೆ. ಒಳ್ಳೆಯದು. ಒಂದು ವರ್ಷದಲ್ಲಿ ಎಷ್ಟು ಸಲ ಅವಕಾಶವು ದೊರೆಯುತ್ತದೆ? ಒಂದೇ ಸಲ ಅವಕಾಶವು ದೊರೆಯುತ್ತದೆಯೇ, 12 ತಿಂಗಳನ್ನು 13 ತಿಂಗಳಂತೂ ಮಾಡಲು ಸಾಧ್ಯವಿಲ್ಲ. **ಬಾಪ್‌ದಾದಾರವಗೆ ಏನು ಮನಸ್ಸಾಗುತ್ತದೆಯೆಂದರೆ, ಶಿಕ್ಷಕಿಯರು**

ಹೇಗೆ ರಿಫ್ರೆಷ್ ಆಗಿ ಹೋಗಬೇಕೆಂದರೆ, ಶಕ್ತಿಶಾಲಿಯಾಗಿ ಹೋಗಬೇಕೆಂದರೆ ಸೇವಾಕೇಂದ್ರದಲ್ಲಿ ಯಾರಾದರೂ ಹೋದರೆ, ಒಬ್ಬ ಆತ್ಮನೂ ಬಲಹೀನರಾಗಿರುವುದು(ದುರ್ಬಲ) ಕಂಡುಬರಬಾರದು. ನಿರ್ವಿಘ್ನ ಸೇವಾಕೇಂದ್ರ ವಾಗಬೇಕು. ಅದಕ್ಕೇ ಅಂಕಗಳು ದೊರೆಯುತ್ತವೆ. ಈ ಜೋನಿನಲ್ಲಿ ಸಾವಿರ ಸೇವಾಕೇಂದ್ರಗಳಿವೆ ಸಾವಿರ ಗೀತಾಪಾಠಶಾಲೆಗಳಿವೆ ಎಂದ ಮಾತ್ರಕ್ಕೇ ಬಾಪ್‌ದಾದಾರು ಖುಷಿಯಾಗುವುದಿಲ್ಲ. ಯಾವ ಜೋನಿನಲ್ಲಿ ಏನೂ ಜಗಳವಿಲ್ಲವೋ, ಯಾವ ದೂರೂ ಇಲ್ಲವೋ ಅದರ ಬಗ್ಗೆ ಬಾಪ್‌ದಾದಾರಿಗೆ ಖುಷಿಯಾಗುತ್ತದೆ. ಏಕೆಂದರೆ ವಾಸ್ತವವಾಗಿ ಜಗಳವಾಗುತ್ತಾ ಇದ್ದರೆ, ಹಾಗೂ ಶಿಕ್ಷಕಿಯು ಶ್ರಮವಹಿಸುತ್ತಿದ್ದರೂ ವಾತಾವರಣವು ಹಾಗೆಯೇ ಇದ್ದರೆ ಅದು ಸೇವೆಯೇ? ಅಥವಾ ಜಗಳವೇ? ಏಕೆ ಬಂದಿದ್ದೀರಿ? ಏಕೆ ಬ್ರಹ್ಮಾಕುಮಾರರು ಅಥವಾ ಬ್ರಹ್ಮಾಕುಮಾರಿಯರಾಗಿದ್ದೀರಿ? ಗೊಂದಲವನ್ನುಂಟು ಮಾಡುವುದಕ್ಕಾಗಿಯೇ? ಒಂದುವೇಳೆ ಜಗಳ, ಗಲಭೆಯೇ ಬೇಕಿದ್ದರೆ ಪ್ರಪಂಚದಲ್ಲಿ ಅಂತಹ ಸ್ಥಳಗಳು ಅನೇಕವಿವೆ. ಬಾಪ್‌ದಾದಾರು ಅವುಗಳ ವಿಳಾಸವನ್ನೂ ಕೊಡುತ್ತೇವೆ. ಆದರೆ ಬ್ರಹ್ಮಾಕುಮಾರ ಹಾಗೂ ಬ್ರಹ್ಮಾಕುಮಾರಿ ಯಾಗುವುದೆಂದರೆ ಮಿಲನ ಮೇಳವನ್ನು ಆಚರಿಸುವುದಾಗಿದೆ. ಜಗಳ ಮಾಡುವುದಲ್ಲ. ಈಗ ನೀವು ಬಂದಿದ್ದೀರಲ್ಲವೇ. ಯಾವ ಲಕ್ಷ್ಯದಿಂದ ಬಂದಿದ್ದೀರಿ? ಜಗಳವನ್ನುಂಟುಮಾಡಲು ಬಂದಿದ್ದೀರಾ? ಮಿಲನ ಮಾಡಲು ಬಂದಿರುವುದರಿಂದ ಹಿತವೆನಿಸುತ್ತದೆಯಲ್ಲವೇ. ಆದ್ದರಿಂದ ಎಂದೂ, ಯಾರಾದರೂ ವಿದ್ಯಾರ್ಥಿಯಾಗಿರಲಿ ಅಥವಾ ಶಿಕ್ಷಕಿಯಾಗಿರಲಿ, ಎಲ್ಲರೂ ವಿದ್ಯಾರ್ಥಿಗಳಾಗಿದ್ದಾರೆ. ಜಗಳ ಮಾಡುವುದನ್ನು ಏನೆಂದು ಕರೆಯಬಹುದು. ಬಾಪ್‌ದಾದಾರವರಿಗೆ ಅದನ್ನು ಹೇಳುವುದೂ ಇಷ್ಟವಾಗುವುದಿಲ್ಲ. ಆದ್ದರಿಂದ ಇಂದಿನ ವಿಶೇಷ ಪಾಠವೇನಾಗಿದೆಯೆಂದರೆ, ಶಿಕ್ಷಕಿಯಾಗಿರಲಿ, ಮಧುಬನದವರಾಗಿರಲಿ, ಮಧುಬನದ ಉಪಸೇವಾಕೇಂದ್ರ ಅಥವಾ ಗೀತಾಪಾಠಶಾಲೆಗಳಾಗಿರಲಿ ಅಥವಾ ನಿಮ್ಮ ಜೋನಿನ ಉಪಸೇವಾಕೇಂದ್ರ ಅಥವಾ ಸೇವಾಕೇಂದ್ರವಾಗಿರಲಿ, ಯಾರು ನಿಮ್ಮನ್ನು ಬ್ರಾಹ್ಮಣ ಆತ್ಮನೆಂದು ಹೇಳಿಕೊಳ್ಳುತ್ತೀರೋ ಅವರು ಜಗಳ ಮಾಡಬಾರದು. ಇಲ್ಲದಿದ್ದರೆ ನಿಮ್ಮನ್ನು ಬ್ರಾಹ್ಮಣರೆಂದು ಹೇಳಿಕೊಳ್ಳಬೇಡಿರಿ. ಕೃತ್ರಿಯರೆಂದು ಹೇಳಿಕೊಳ್ಳಿರಿ. ಬ್ರಾಹ್ಮಣ ಎನ್ನುವ ಹೆಸರಿಗೆ ಕಳಂಕ ತರಬೇಡಿರಿ, ಬ್ರಾಹ್ಮಣರೆಂದರೆ ವಿಜಯಶಾಲಿ, ಒಂದುವೇಳೆ ಜಗಳ ಮಾಡಿದರೆ ಕ್ಷತ್ರಿಯರಾಗುತ್ತೀರಿ, ಬ್ರಾಹ್ಮಣರಾಗುವುದಿಲ್ಲ.

ಹಾಗಾದರೆ ಈದಿನ ಏನು ಸಂಕಲ್ಪ ಮಾಡುತ್ತೀರಿ? ಪ್ರತಿಯೊಬ್ಬರೂ ಮನ, ವಚನ, ಕರ್ಮ, ಸಂಬಂಧ, ಸಂಪರ್ಕದಲ್ಲಿ ಜಗಳದಿಂದ ಮುಕ್ತನಾಗುತ್ತೇನೆ ಎನ್ನುವ ಸಂಕಲ್ಪ ಮಾಡಿರಿ. ಜಗಳವಿರಬಾರದು. ಪ್ರತಿದಿನವೂ ಏನು ಪರಿಶೀಲನೆ ಮಾಡಿಕೊಳ್ಳುತ್ತೀರೆಂದರೆ ಜಗಳವೇನಾದರೂ ಇದೆಯೇ ಎಂದು. ವ್ಯರ್ಥ ಸಂಕಲ್ಪಗಳು ಕೂಡ ಜಗಳವೇ. ಇದು ಅನ್ಯರೊಂದಿಗೆ ಆಗುವ ಜಗಳವಲ್ಲ, ನಿಮ್ಮ ಮನಸ್ಸಿನಲ್ಲಿ ಆಗುವ ಜಗಳ ಆದರೆ ಎಲ್ಲರೂ ಯಾವ ಸಂಕಲ್ಪವನ್ನು ಮಾಡುತ್ತೀರಿ? ಹೇಗಾಗುತ್ತೀರಿ? ಜಗಳಗಳಿಂದ ಮುಕ್ತರಾಗುತ್ತೇವೆ ಎಂದು ಹೇಳಿರಿ. ಏಕೆಂದರೆ ಡೈಮಂಡ್ ಜುಬ್ಲಿ ಬರುತ್ತಿದೆಯಲ್ಲವೇ, ಡೈಮಂಡ್ ಜುಬ್ಲಿಯಲ್ಲಿ ಜಗಳ ಮಾಡದ ವಜ್ರ ಬೇಕಾಗಿದೆ. ನೀವು ಡೈಮಂಡ್ ಜೂಬ್ಲಿಯಲ್ಲಿ ತುಂಬಾ ಸುಂದರ ವಜ್ರಗಳ ಮಧ್ಯದಲ್ಲಿ ಒಂದುವೇಳೆ ಮೂರು ನಾಲ್ಕು ದೋಷವುಳ್ಳ ವಜ್ರಗಳಿದ್ದರೆ ಇಷ್ಟಪಡುವಿರಾ? ಇಷ್ಟ ಪಡುವುದಿಲ್ಲ. ಆದರೆ ಇದರ ತುಂಬಾ ಸಹಜ ವಿಧಿಯು ಏನಾಗಿದೆ. ಶ್ರಮಪಡುವ ಅವಶ್ಯಕತೆಯೂ ಇಲ್ಲ. ಜಗಳದಿಂದ ಮುಕ್ತರಾಗುವ ಎಲ್ಲಕ್ಕಿಂದಲೂ ಸಹಜವಾದ ವಿಧಿಯು ಮೊದಲು ಸ್ವಯಂ ನಿಮ್ಮನ್ನು ಜಗಳದಿಂದ ಮುಕ್ತರನ್ನಾಗಿ

ಮಾಡಿಕೊಳ್ಳಿರಿ. ಅನ್ಯರ ಗೋಜಿಗೆ ಹೋಗಬೇಡಿರಿ. ಈ ವಿದ್ಯಾರ್ಥಿಯು ಇಂತಹವರಾಗಿದ್ದಾರೆ. ಈ ಸಾಥಿಯು ಅಂತಹವರಾಗಿದ್ದಾರೆ. ಈ ಪರಿಸ್ಥಿತಿಗಳು ಇಂತಹವಾಗಿವೆ ಇದನ್ನು ನೋಡಬೇಡಿರಿ. ಆದರೆ ನಿಮ್ಮನ್ನು ಜಗಳದಿಂದ ಮುಕ್ತರನ್ನಾಗಿ ಮಾಡಿಕೊಳ್ಳಿರಿ. ಎಲ್ಲಿ ಜಗಳವಿದೆಯೋ ಅಲ್ಲಿಂದ ನಿಮ್ಮ ಮನಸ್ಸು, ಬುದ್ಧಿಯನ್ನು ದೂರ ಮಾಡಿಬಿಡಿ. ಈ ಗೊಂದಲವು ಪೂರ್ತಿಯಾಗಿಬಿಟ್ಟರೆ ತುಂಬಾ ಒಳಿತಾಗಿ ಬಿಡುತ್ತದೆಯೆಂದು ನೀವು ವಿಚಾರ ಮಾಡುತ್ತೀರಿ. ನಮ್ಮ ಸ್ಥಿತಿಯೂ ಉತ್ತಮವಾಗಿ ಬಿಡುತ್ತದೆ. ನಮ್ಮ ಸೇವೆಯೂ ಚೆನ್ನಾಗಿ ಆಗುತ್ತದೆ ಎಂದು ತಿಳಿದುಕೊಂಡಿದ್ದೀರಿ. ಆದರೆ ಜಗಳವು ಬೆಟ್ಟದ ಸಮಾನ ಇದೆ. ಬೆಟ್ಟದೊಂದಿಗೆ ತಲೆಯನ್ನು ಚಚ್ಚಿಕೊಳ್ಳಬೇಕೇ? ಬೆಟ್ಟವು ದೂರ ಸರಿಯುತ್ತದೆಯೇ? ಸ್ವಯಂ ನೀವು ದೂರ ಸರಿದುಬಿಡಿ. ಅಥವಾ ಹಾರುವ ಕಲೆಯಿಂದ ಜಗಳಗಳ ಬೆಟ್ಟಕ್ಕಿಂತಲೂ ಮೇಲೆ ಹೋಗಿಬಿಡಿ. ಬೆಟ್ಟವನ್ನೂ ಸಹ ನಿಮಗೆ ನೀವು ಸಹಜವಾಗಿ ದಾಟಬಹುದೆಂಬ ಅನುಭವವಾಗುವುದು. ನಾನು ಜಗಳದಿಂದ ಮುಕ್ತವಾಗಬೇಕು ಎನ್ನುವ ಸಂಕಲ್ಪವನ್ನು ಅಮೃತವೇಳೆಯಿಂದ ಸ್ವಯಂ ನಿಮ್ಮೊಂದಿಗೆ ಮಾಡಿಕೊಳ್ಳಿರಿ. ಉಳಿದಂತೆ ಇದು ಜಗಳಗಳ ಪ್ರಪಂಚವೇ ಆಗಿದೆ. ಜಗಳಗಳು ಬಂದೇ ಬರುವುವು. ನಿಮ್ಮ ಪ್ರಪಂಚ ನಿಮ್ಮ ಸೇವಾಕೇಂದ್ರವಾಗಿರುವುದರಿಂದ, ನಿಮ್ಮ ಪ್ರಪಂಚವೇ ಆದಾಗಿರುವುದರಿಂದ ಅಲ್ಲಿಯೇ ಜಗಳಗಳು ಬರುವುವಲ್ಲವೇ. ನೀವು ಪರೀಕ್ಷೆಯನ್ನು ಕೊಡುವ ಸಲುವಾಗಿ ಅಮೇರಿಕಾ ಅಥವಾ ಲಂಡನ್ ನಗರದಲ್ಲಿ ಹೋಗುವಿರಾ? ಸೇವಾಕೇಂದ್ರದಲ್ಲಿಯೇ ಪರೀಕ್ಷೆ ಕೊಡುವಿರಲ್ಲವೇ. ಆದ್ದರಿಂದ ಜಗಳಗಳು ಬರಬಾರದು ಎಂದು ಯೋಚಿಸಬೇಡಿರಿ. ನಾನು ಜಗಳಗಳಿಂದ ಮುಕ್ತನಾಗಬೇಕು ಎಂದು ಸಂಕಲ್ಪ ಮಾಡಿರಿ. ಜಗಳಗಳಿಂದ ಮುಕ್ತರಾಗುವುದು ಸಾಧ್ಯವೇ? ಅಥವಾ ಸೇವಾಕೇಂದ್ರಕ್ಕೆ ಅಥವಾ ಮನೆಗೆ ಹೋದ ಮೇಲೆ ಈ ಜಗಳಗಳನ್ನು ನನ್ನಿಂದ ಏನೂ ಮಾಡಲಾಗುವುದಿಲ್ಲ ಎಂದು ಹೇಳುವಿರೋ, ಹಾಗಂತೂ ಇಲ್ಲ ತಾನೇ? ಏಕೆಂದರೆ ಹಳೆಯ ಪ್ರಪಂಚದಿಂದ, ಹಳೆಯ ಪ್ರಪಂಚದ ಪ್ರಾಪ್ತಿಗಳಿಂದ ಈಗ ನಿಮ್ಮ ಮನಸ್ಸು ಹಾಗೂ ಬುದ್ಧಿಯನ್ನು ಮೇಲಕ್ಕೆ ತೆಗೆದುಕೊಂಡು ಹೋಗಿರಿ. ಹಳೆಯ ಪ್ರಪಂಚದಿಂದ ಲಂಗರನ್ನು ಎತ್ತಿ ಬಿಟ್ಟಿರೋ ಅಥವಾ ಇನ್ನೂ ಕಟ್ಟಿ ಹಾಕಲ್ಪಟ್ಟಿದೆಯೋ? ಕಟ್ಟಿಹಾಕಲ್ಪಟ್ಟಿಲ್ಲ ತಾನೇ? ಕಟ್ಟಿಹಾಕಲ್ಪಟ್ಟಿದೆಯೇನು? ತಿಳಿದುಕೊಳ್ಳದೇ ಇರುವುದೂ ಸಹ ಅಂಧಕಾರವಾಗಿದೆ. ಆ ಸ್ಥೂಲ ಅಂಧಕಾರವಲ್ಲ. ಆದರೆ ಅಜ್ಞಾನದಲ್ಲಿರುವುದೂ ಅಂಧಕಾರವಾಗಿದೆ. ಆದ್ದರಿಂದ ಅಂಧಕಾರದಲ್ಲಿ ಉಳಿದು ಬಿಡಬೇಡಿ. ಚೆನ್ನಾಗಿ ಪರಿಶೀಲನೆ ಮಾಡಿಕೊಳ್ಳಿರಿ. ಜಗಳಗಳಿಂದ ಮುಕ್ತರಾಗುವುದರಲ್ಲಿ ಯಾವ ಸೇವಾಕೇಂದ್ರ ಅಥವಾ ಮಧುಬನವು ನಂಬರ್‌ವನ್ ಆಗುತ್ತದೆ ಎನ್ನುವುದನ್ನು ನೋಡುವೆವು.

ಮಧುಬನದವರೂ ಆಗಬೇಕು. ಯಾವ ತಂಡದವರು ಬಂದಿದ್ದಾರೋ ಅವರು ಮಾತ್ರವೇ ಕೇವಲ ಜಗಳಗಳಿಂದ ಮುಕ್ತರಾಗಬೇಕೆಂದು ಹೇಳುತ್ತಿಲ್ಲ. ಮಧುಬನದವರು ಕೆಳಗಡೆ ಹಾಲ್‌ನಲ್ಲಿ ಕುಳಿತುಕೊಂಡಿದ್ದಾರಲ್ಲವೇ. ಆದ್ದರಿಂದ ಎಲ್ಲಾದರೂ ಕುಳಿತಿರಬಹುದು. ಆದರೆ ಎಲ್ಲರೂ ಬಾಪ್‌ದಾದಾರ ಎದುರಿಗೆ ಇದ್ದೀರಿ. ನೀವು ಟಿ.ವಿ.ಯ ಎದುರಿನಲ್ಲಿ ಇದ್ದೀರಿ ಬಾಪ್‌ದಾದಾರು ನಿಮ್ಮ ಮುಂದೆ ಇದ್ದೇವೆ. ಹೀಗೆ ಮಧುಬನದವರಾಗಿರಲಿ ಅಥವಾ ದೇಶವಿದೇಶದವರು ಯಾರು ಯಾರು ಇದ್ದಾರೋ ಎಲ್ಲರೂ ಇದರಲ್ಲಿ ನಂಬರ್‌ವನ್ ಆಗಿರಿ. ಆಮೇಲೆ ಡೈಮಂಡ್ ಜೂಬ್ಲಿಯನ್ನು ತುಂಬಾ ವಿಜೃಂಭಣೆಯಿಂದ ಆಚರಿಸೋಣ. ಈಗ ಬಾಪ್‌ದಾದಾರವರಿಗೆ ಸ್ವಲ್ಪ ಸ್ವಲ್ಪ ನಿಮ್ಮ ಅಂತರಂಗದ ವಿಚಾರವನ್ನು ತಿಳಿಸಿರಿ. ಅಲ್ಪಸ್ವಲ್ಪ

ಇರುತ್ತದೆಯೋ ಅಥವಾ ಎಲ್ಲಾ ಮುಕ್ತ ಮುಕ್ತರಾಗಿಬಿಡುವಿರೋ? ಆದರೆ ಬಾಪ್‌ದಾದಾರ ಈ ಸಂಕಲ್ಪವು ಸರಿಯಲ್ಲವೆಂದು ತಿಳಿದುಕೊಂಡಿದ್ದೀರಲ್ಲವೇ? ಸರಿಯಾಗಿದೆಯೇ? ಸರಿಯಾಗಿದೆಯೇ? ತಂದೆಗಂತೂ ಮಕ್ಕಳ ಬಗ್ಗೆ ನಿಶ್ಚಯವಿದೆಯಲ್ಲವೇ. ಆದರೆ ಸ್ವಲ್ಪ ಸ್ವಲ್ಪ ಆತಂಕವು ಬರುತ್ತದೆಯೇ? ಏನು ಮಾಡುವಿರಿ? ಹೇಳಿರಿ. ಡೈಮಂಡ್ ಜೂಬ್ಲಿಯ ಆರಂಭದಲ್ಲಿ ಮುಕ್ತರಾಗಿ ಬಿಡುವಿರೋ ಅಥವಾ ಸಮಾಪ್ತಿಯ ವೇಳೆಗೆ ಮುಕ್ತರಾಗುವಿರೋ? ಪ್ರಾರಂಭವಾಗಲು ಎಷ್ಟು ಸಮಯ ಉಳಿದಿದೆ? ಒಂದು ತಿಂಗಳು. ಪ್ರಾರಂಭವಾಗಲಿದೆ. ಡೈಮಂಡ್ ಜೂಬಿಲಿಯು ಜನವರಿಯಿಂದ ಸ್ವಲ್ಪ ಸಮಯಾವಕಾಶವು ಬೇಕಾಗುತ್ತದೆ ಎಂದು ತಿಳಿದುಕೊಂಡಿರುವವರು ಇದ್ದೀರಾ? ಇಷ್ಟು ಸ್ವಲ್ಪ ಸಮಯದಲ್ಲಿ ಹೇಗೆ ಆಗಿಬಿಡುವುದು? 63 ಜನ್ಮಗಳ ಸಂಸ್ಕಾರಗಳಿವೆ. ಸಮಾಪ್ತಿಯಾಗಿ ಬಿಡುತ್ತವೆಯೇ ಒಂದು ತಿಂಗಳಿನಲ್ಲಿ ಕಷ್ಟವೆನಿಸುತ್ತದೆ ಅಲ್ಲವೇ. ಸಮಯಾವಕಾಶವು ಬೇಕೇನು? 2 ತಿಂಗಳು, 6 ತಿಂಗಳು. ಎಷ್ಟು ಸಮಯ ಬೇಕೆಂದು ತಿಳಿದುಕೊಂಡಿದ್ದೀರಿ? ಸ್ವಲ್ಪ ಸಮಯವು ಬೇಕೆಂದು ತಿಳಿದುಕೊಂಡಿರುವವರು ಕೈ ಎತ್ತಿರಿ. ಒಳ್ಳೆಯದು, ಸಮಯವು ಬೇಕೇನು? ಒಳ್ಳೆಯದು, ಯಾರು ಕೈ ಎತ್ತಿದ್ದಿರೋ ಅವರು ಎದ್ದು ನಿಂತುಕೊಳ್ಳಿರಿ. ಸತ್ಯವನ್ನು ಹೇಳಿದಿರಲ್ಲವೇ. ಒಳ್ಳೆಯದು. ಇವರಿಗೆ ಸಮಯವು ಬೇಕಾಗುತ್ತದೆ. ಇವರ ಫೋಟೊ ತೆಗೆದುಕೊಳ್ಳಿರಿ. ಇವರಿಗೆ ಸಮಯವನ್ನು ಕೊಡುವೆವು ಗಾಬರಿಯಾಗಬೇಡಿರಿ. ಇನ್ನೂ ಯಾರು ಕೈಯನ್ನು ಎತ್ತಿದ್ದೀರೋ ಅವರು ಚೀಟಿಯಲ್ಲಿ ಸೇವಾಕೇಂದ್ರದ ಹೆಸರು ಹಾಗೂ ನಿಮ್ಮ ಹೆಸರನ್ನು ಬರೆದು ಶಾಂತಾಮಣಿಯ ಕೈಯಲ್ಲಿ ಕೊಡಿ. ಚೀಟಿ ಬರೆದುಕೊಡಲು ಅಡ್ಡಿಯಿಲ್ಲ. ನೀವು ಸತ್ಯವನ್ನು ಹೇಳಿದಿರಲ್ಲವೇ. ಆದ್ದರಿಂದ ಬೇಗನೆ ಮುಕ್ತರಾಗಿ ಬಿಡುವಿರಿ.  ಇಷ್ಟೊಂದು ಮಕ್ಕಳೆಲ್ಲರೂ ಒಂದುವೇಳೆ ಮುಕ್ತರಾಗಿ ಬಿಟ್ಟರೆ ಇನ್ನೂ ಕೆಲವರು ನಿಮ್ಮ ಬಾಲವನ್ನು ಹಿಡಿದುಕೊಂಡಾದರೂ ಮುಕ್ತರಾಗಿ ಬಿಡುವರು. ಒಳ್ಳೆಯದು ಪಾಠವು ಪಕ್ಕಾ ಆಯಿತಲ್ಲವೇ, ಏನಾಗಬೇಕಾಗಿದೆ? ಪಕ್ಕಾ ನಿಶ್ಚಯವಿದೆಯೇ? ಪೋಸ್ಟ್‌ನಲ್ಲಿ ಬರುವ ಪತ್ರಗಳನ್ನು ನೋಡುವ ಈಶೂ ಎಲ್ಲಿದ್ದಾಳೇ? ಇವರ ಬಳಿ ಪೋಸ್ಟ್ ಬರುತ್ತದೆ. ಒಂದು ತಿಂಗಳಿನ ನಂತರ ಜಗಳದ ಪತ್ರವು ಯಾವುದೂ ಬರಬಾರದು. ಇವರನ್ನು ಗುರುತಿಸುತ್ತೀರಲ್ಲವೇ. ಇವಳೊಂದಿಗೆ ಎಲ್ಲರೂ ಸಂಪರ್ಕದಲ್ಲಿ ಬರಬೇಕಾಗುತ್ತದೆ. ಭವಿಷ್ಯವನ್ನು ರೂಪಿಸಿಕೊಡಲು ನಿಮಿತ್ತವಾಗಿಯಂತೂ ಇಡಲ್ಪಟ್ಟಿದ್ದಾಳಲ್ಲವೇ. ಎಲ್ಲರೂ ಇಲ್ಲಿಯೇ ಬಂದು ಜಮಾ ಮಾಡುತ್ತಾರೆ.

ಒಳ್ಳೆಯದು ಡಬಲ್ ವಿದೇಶೀಯರು ಏನು ಹೇಳುವಿರಿ? ಜೋನ್‌ಗಳಂತೂ ಅನೇಕವು ಬಂದಿವೆ. (ಎಲ್ಲಾ ಜೋನ್‌ಗಳವರಿಂದ ಬಾಪ್ ದಾದಾರು ಕೈ ಎತ್ತಿಸಿದರು) ತಮಿಳ್ನಾಡಿನವರು ಹೆಡ್‌ಫೋನ್ ಇಲ್ಲದೆ ತಿಳಿದುಕೊಳ್ಳಬಲ್ಲಿರಾ? ಕುಳಿತುಕೊಳ್ಳುವುದೇನೋ ಎಲ್ಲರೊಂದಿಗೆ ಬೆರೆತು ಕುಳಿತುಕೊಂಡಿದ್ದಾರೆ.

ಒಳ್ಳೆಯದು. ಎಲ್ಲಾ ಜೋನ್‌ನವರೂ, ದೆಹಲಿಯಾಗಿರಲಿ, ಗುಜರಾತ್ ಆಗಿರಲಿ, ತಮಿಳ್ನಾಡು ಆಗಿರಲಿ ಯಾರು ಯಾರು ಇದ್ದೀರೋ ಎಲ್ಲರ ಮನಸ್ಸಿನಲ್ಲಿ ಡೈಮಂಡ್ ಜೂಬ್ಲಿಯ ಉಲ್ಲಾಸ ಉತ್ಸಾಹವು ತುಂಬಾ ಚೆನ್ನಾಗಿರುವುದನ್ನು ಬಾಪ್‌ದಾದಾರು ನೋಡಿದೆವು. ಹಾಗೂ ಯಜ್ಞದ ಸ್ಥಾಪನೆಯಾದಾಗಿನಿಂದ 60 ವರ್ಷಗಳವರೆಗೆ ನಿರ್ವಿಘ್ನವಾಗಿ ನಡೆದಿರುವುದರ ಚಿಹ್ನೆಯಾಗಿ ಈ ಡೈಮಂಡ್ ಜೂಬ್ಲಿಯು ವ್ಯವಸ್ಥಿತವಾಗಿದೆ ಹಾಗೂ ಮುಂದೆಯೂ ನಿರ್ವಿಘ್ನವಾಗಿ ನಡೆಯುತ್ತಾ ಇರುವುದು. 60 ವರ್ಷಗಳು ವೃದ್ಧಿಯಾಗುತ್ತಾ ಬಂದಿದೆ. ಸಂಸ್ಥೆಯು ಸಮಾಪ್ತಿಯಾಗಿ ಬಿಡದಿರುವುದು, ಅಥವಾ

ಜಗಳದಲ್ಲಿ ಅವ್ಯವಸ್ಥೆಯಾಗದೆ ಇರುವುದು, ವಿಶಾಲ ಪ್ರಪಂಚದಲ್ಲಿ ಈ ವಿಶ್ವವಿದ್ಯಾಲಯದ ಪ್ರತಿಷ್ಠೆಯಾಗಿದೆ. ಹೀಗೆ ಡೈಮಂಡ್ ಜೂಬ್ಲಿ ಆಚರಣೆ ಮಾಡುವುದು ಅರ್ಥಾತ್ ನಾವು ಇಂತಹ ವಿಶ್ವವಿದ್ಯಾಲಯದ ಅಥವಾ ಇಂತಹ ಶ್ರೇಷ್ಠ ಕಾರ್ಯದ ಸಾಥಿಯಾಗಿದ್ದೇವೆ ಎನ್ನುವುದು ಪ್ರತಿಯೊಬ್ಬ ಬ್ರಾಹ್ಮಣರ ಘನತೆಯಾಗಿದೆ. 60 ವರ್ಷಗಳೇನೂ ಕಡಿಮೆಯಲ್ಲ. ಆದರೆ ಪ್ರಪಂಚದ ಜನರಿಗಂತೂ ಅಸಂಭವದ ಸಂಗತಿಯಾಗಿದೆ. ಆದರೆ ಪರಮಾತ್ಮನ ಕಾರ್ಯವು ಸದಾ ಅಚಲ, ಅವಿನಾಶಿಯಾಗಿದೆ. ಹೀಗೆ ಸಂಸ್ಥೆಯ ಘನತೆ ಆರ್ಥಾತ್ ಪ್ರತಿಯೊಬ್ಬ ಬ್ರಾಹ್ಮಣ ಆತ್ಮನ ಘನತೆಯಾಗಿದೆ. ನಮ್ಮ ಕಾರ್ಯದ ಡೈಮಂಡ್ ಜೂಬ್ಲಿಯಾಗಿದೆ ಎಂದು ನೀವು ನಶೆಯಿಂದ ಹೇಳಬಹುದು. ಪ್ರಪಂಚದ ಜನರು ಏನು ತಿಳಿದುಕೊಂಡಿದ್ದಾರೆಂದರೆ ಯಾರಾದರೂ ದೊಡ್ಡ ಗುರುವು ದೇಹತ್ಯಾಗ ಮಾಡಿದರೆ ಆ ಸಂಸ್ಥೆಯೂ ಹೋಯಿತು ಎಂದು. ಹಾಗೆಯೇ ಇವರ ಬ್ರಹ್ಮಾಬಾಬಾ ಅವ್ಯಕ್ತರಾದರು ಆದ್ದರಿಂದ ಎಲ್ಲವೂ ಸಮಾಪ್ತಿಯಾಗಿಬಿಟ್ಟಿತು ಎಂದು ತಿಳಿದುಕೊಂಡಿದ್ದಾರೆ. ಆದರೆ ಬ್ರಹ್ಮಾಬಾಬಾರ ಮೂಲಕ ನಡೆಸುವವರೂ ಅವಿನಾಶೀ ತಂದೆಯಾಗಿದ್ದಾರೆ ಎಂಬುದನ್ನು ನೀವು ತಿಳಿದುಕೊಂಡಿದ್ದೀರಿ. ಹೀಗೆ ಈ ಡೈಮಂಡ್ ಜೂಬ್ಲಿಯು ಒಂದು ಕಾರ್ಯದ ಸಫಲತೆಯ ಚಿಹ್ನೆಯಾಗಿದೆ. ಇದರಲ್ಲಿ ಯುವಕರಾಗಿರಲಿ, ಪ್ರವೃತ್ತಿಯವರಾಗಿರಲಿ, ಎಲ್ಲರೂ ಡೈಮಂಡ್ (ವಜ್ರ) ಆಗಬೇಕು ಹಾಗೂ ಅನ್ಯ ವಜ್ರಗಳ ಮಾಲೆಯನ್ನು ತಯಾರು ಮಾಡಬೇಕು. ಒಂದುವೇಳೆ ನೀವು ಸ್ವಯಂ ನಿರ್ವಿಘ್ನ, ಶ್ರೇಷ್ಠ ಡೈಮಂಡ್ ಆಗಿದ್ದರೆ ಅನ್ಯರನ್ನೂ ಅಂತಹವರನ್ನಾಗಿಯೇ ತಯಾರು ಮಾಡುವಿರಿ. ಒಳ್ಳೆಯದು.

**ನಾಲ್ಕೂ ಕಡೆಯ ಸದಾ ಶ್ರೇಷ್ಠ ಭಾಗ್ಯವಂತರು ಭಾಗ್ಯವಿಧಾತನನ್ನು ನಿಮ್ಮವರನ್ನಾಗಿ ಮಾಡಿಕೊಳ್ಳುವ ಶ್ರೇಷ್ಠ ಅತ್ಮರಿಗೆ ಸದಾ ಬಾಪ್ ದಾದಾರವರ ಶ್ರೀಮತವನ್ನು ಕೇಳಿದ ಕೂಡಲೇ ಕಾರ್ಯಗತ ಮಾಡುವ ಸರ್ವ ಸಪುತ್ರ ಮಕ್ಕಳಿಗೆ, ಸದಾ ಸೇವೆಯಲ್ಲಿ ಅಚಲವಾಗಿರುವ ಗೊಂದಲದಿಂದ ಮುಕ್ತರಾದ ಹಾಗೂ ಪರಮಾತ್ಮ ಮಿಲನದ ಮೇಳವನ್ನು ಮಾಡುವ ಎಲ್ಲಾ ಮಕ್ಕಳಿಗೂ ಬಾಪ್ ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 04-12-1995.

***ಯಥಾರ್ಥ ನಿಶ್ಚಯದ ಬುನಾದಿಯ ಮೂಲಕ ಸಂಪೂರ್ಣ ಪವಿತ್ರತೆಯನ್ನು ಧಾರಣೆ ಮಾಡಿರಿ.***

ನಿಶ್ಚಯವೇ ಈ ಬ್ರಾಹ್ಮಣ ಜೀವನದ ಸಂಪನ್ನತೆಗೆ ಬುನಾದಿ ಮತ್ತು ಬುನಾದಿ ಗಟ್ಟಿಯಾಗಿದ್ದರೆ ಸಹಜವಾಗಿ ಮತ್ತು ತೀವ್ರ ವೇಗದಿಂದ ಸಂಪೂರ್ಣತೆಯವರೆಗೆ ತಲುಪುವುದು ಎಂಬುದು ನಿಶ್ಚಿತವಾಗಿ ಬಿಡುತ್ತದೆ. ಯಥಾರ್ಥ ನಿಶ್ಚಯ ಎಂದರೆ ಸ್ವಯಂನ್ನು ಆತ್ಮ ರೂಪದಲ್ಲಿ ತಿಳಿದುಕೊಳ್ಳುವುದು, ಅಂಗೀಕರಿಸುವುದು, ನಡೆಯುವುದು ಮತ್ತು ತಂದೆಯನ್ನು ಕೂಡ ಹೇಗಿದ್ದಾರೆಯೋ ಹಾಗೆಯೇ ತಿಳಿದುಕೊಳ್ಳಬೇಕು. ಎಂದು ಹೇಳುತ್ತಾ ಶಿವಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ವಯಂ ಅನ್ನು ಆತ್ಮರೂಪದಲ್ಲಿ ತಿಳಿದುಕೊಂಡು, ಅಂಗೀಕರಿಸಿ, ನಡೆದು ತಂದೆಯನ್ನು ಕೂಡ ಹೇಗಿದ್ದಾರೆಯೋ ಹಾಗೆಯೇ ತಿಳಿದುಕೊಂಡಿರುವ ಯಥಾರ್ಥ ನಿಶ್ಚಯ ಬುದ್ಧಿ ಸ್ವರೂಪ.

2. ನಾನು ಪವಿತ್ರತೆ ಎಂಬ ಸ್ವಧರ್ಮದಲ್ಲಿ ನಿಶ್ಚಯದಿಂದ ಇದ್ದೇನೆ.

3. ನಾನು ನನ್ನ ಯಾವ ಸ್ವಭಾವ ಅಥವಾ ಸಂಸ್ಕಾರವು ಬಲಹೀನವಾಗಿದೆಯೋ (ಅದೇ ಮಾಯೆಯು ತನ್ನ ದ್ವಾರವನ್ನಾಗಿ ಮಾಡಿಕೊಳ್ಳುತ್ತದೆ) ಪರಿಶೀಲಿಸಿಕೊಂಡು ಆ ಸ್ವಭಾವ, ಸಂಸ್ಕಾರವನ್ನು ಪರಿವರ್ತನೆ ಮಾಡಿಕೊಂಡು, ಸರ್ವಶಕ್ತಿವಂತನನ್ನು ಸದಾ ಜೊತೆಯಲ್ಲಿ ಇಟ್ಟುಕೊಂಡಿರುವ ಮಾಯಾಜಿತ್ ಸ್ವರೂಪ.

4. ನಾನು ನನ್ನ ಹತ್ತಿರ ಬರುವ ರಾಯಲ್ ಲೋಭದ ರೂಪವನ್ನು ದೂರದಿಂದಲೇ ಪರಿಶೀಲಿಸಿಕೊಂಡು ತೊಲಗಿಸಿಕೊಂಡಿರುವ ಸದಾ ನಿಶ್ಚಯ ಬುದ್ಧಿ, ಸೇವಾಧಾರಿಯಾಗಿದ್ದೇನೆ.

5. ನಾನು "ನಾನು ಆತ್ಮ, ತಂದೆ ಸರ್ವಶಕ್ತಿವಂತನು" ಎಂಬ ಸಂಕಲ್ಪವನ್ನು ಪ್ರತ್ಯಕ್ಷ ಕರ್ಮದಲ್ಲಿ ತಂದು ಯಥಾರ್ಥ ನಿಶ್ಚಯವನ್ನು ಪಕ್ಕಾ ಮಾಡಿಕೊಂಡಿದ್ದೇನೆ.

6. ನಾನು ನನ್ನ ಸ್ಥಿತಿಯನ್ನು ಸ್ಥಿರವಾಗಿಟ್ಟುಕೊಂಡ ನಿರಂತರ ಸಹಜಯೋಗಿ. (ಕರ್ಮಗಳ ಖಾತೆ ಎದುರಿಗೆ ಬಂದಾಗ ಮನಸ್ಸನ್ನು ಚಂಚಲ ಮಾಡಿಕೊಳ್ಳದೇ, ಸ್ಥಿತಿಯನ್ನು ಏರುಪೇರು ಮಾಡಿಕೊಳ್ಳದೇ, ತಕ್ಷಣವೇ ದೂರದಿಂದ ಸಮಾಪ್ತಿ ಮಾಡಿದಾಗ ನಿರಂತರ ಯೋಗಿ ಆಗಬಲ್ಲೆವು).

7. ನಾನು ಎಂತಹ ಸಮಯವೂ ಆ ಸಮಯದನುಸಾರವಾಗಿ ತಿಳುವಳಿಕೆಯನ್ನು ಉಪಯೋಗಿಸಿ ಸದಾ ಸಫಲತೆಯನ್ನು ಪಡೆದಿರುವ ಜ್ಞಾನ ಸ್ವರೂಪ.

8. ನಾನು ನನ್ನ ಬುದ್ಧಿಯನ್ನು ಸದಾ ಸ್ವಚ್ಛವಾಗಿ, ಸ್ಪಷ್ಟವಾಗಿ ಇಟ್ಟುಕೊಂಡಿರುವ ಯೋಗಿ.

9. ನಾನು ಎಷ್ಟು ಜವಾಬ್ದಾರಿ ಇದ್ದರೂ ಎಷ್ಟು ಗೊಂದಲವೇ ಇದ್ದರೂ ನನ್ನ ಸ್ಥಿತಿಯನ್ನು ಡಬಲ್ ಲೈಟ್ ಆಗಿ ಇಟ್ಟುಕೊಂಡಿರುವ ಧಾರಣಾ ಸ್ವರೂಪ.

10. ನಾನು ಸದಾ ನಿಮಿತ್ತ ಮತ್ತು ನಿರ್ಮಾಣ ಭಾವದಿಂದ ಇರುವ ಸೇವಾಧಾರಿ.

11. ನಾನು ಸದಾ ಸರ್ವಶಕ್ತಿವಂತನಾದ ತಂದೆ ನನ್ನ ಜೊತೆ ಇದ್ದಾರೆ ಎಂದು ಅನುಭವ ಮತ್ತು ನಿಶ್ಚಯದಿಂದ ಇರುತ್ತಾ ಸದಾ ಬ್ರಾಹ್ಮಣ ಜೀವನವನ್ನು ಕಳೆದಿದ್ದೇನೆ.

12. ನಾನು ಮನಸ್ಸಿನಲ್ಲಿ ನಡೆಯುವ ವ್ಯರ್ಥಸಂಕಲ್ಪಗಳ ಜಗಳದಿಂದ ಮುಕ್ತವಾದ ಸಮರ್ಥ ಸ್ವರೂಪ.